**ಅ.ದಾ.ಸಂ. 225/2015 ಪಿ.ಡಬ್ಲೂ.4**

**<u>ದಿನಾಂಕಃ 20.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ- ಪ್ರತಿವಾದಿಗಳ ಪರ ಶ್ರೀ.ಕೆ.ಪಿ.ಎಂ. ವಕೀಲರಿಂದ : -</u>**

1) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ನೀಡಿದ್ದೆನು. ಕಳೆದ 26 ವರ್ಷಗಳಿಂದ ನನಗೆ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇದೆ. ಎಷ್ಟು ಜಮೀನುಗಳ ಮೇಲೆ ಈ ಪ್ರಕರಣವನ್ನು ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವ ಸ್ವತ್ತುಗಳ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವ ಸ್ವತ್ತುಗಳ ಉತ್ತರ ದಿಕ್ಕಿಗೆ ನನಗೆ ಸೇರಿದ ಸ್ವತ್ತು ಇರುತ್ತದೆ. ದಾವಾ ಸ್ವತ್ತಿನಿಂದ 200 ಮೀಟರ್ ಅಂತರದಲ್ಲಿ ನನಗೆ ಸೇರಿದ ಸ್ವತ್ತು ಇರುತ್ತದೆ. 2000 ರಿಂದ 2010 ರವರೆಗೆ ದಾವಾ ಸ್ವತ್ತಿನಲ್ಲಿ ರಾಗಿಯನ್ನು ಬೆಳೆಯುತ್ತಿದ್ದರು. ಈ ಪ್ರಕರಣದಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಬೆಳೆ ಹಾಳು ಮಾಡಿ ಮರ ಕಡಿದು ಜಗಳ ಮಾಡುತ್ತಿದ್ದು ಅಲ್ಲದೆ ಬೇಲಿ ಹಾಕಲು ಬಿಡದ ಕಾರಣ ಈ ದಾವೆಯನ್ನು ಹೂಡಲಾಗಿದೆ. ಈ ದಾವೆಯನ್ನು ಲಕ್ಷ್ಮಿದೇವಮ್ಮ ರವರು ಪುಟ್ಟಮ್ಮ ರವರ ಮೇಲೆ ಹೂಡಿರುತ್ತಾರೆ.

2) ಸರ್ವೆ ನಂಬರ್ 98/1 ರಲ್ಲಿ ಎಷ್ಟು ವಿಸ್ತೀರ್ಣದ ಸ್ವತ್ತು ಇದೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಿದೇವಮ್ಮ ರವರಿಗೆ ಸ್ವತ್ತು ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**